**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ : ಶ್ರೀ ಆರ್.ಎಸ್.ಎಂ., ವಕೀಲರಿಂದಃ**

ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ. ನಾನು ಡಿ. ಫಾರಂ. ಓದಿರುತ್ತೇನೆ. ನಾನು ರಿಯಲ್ ಎಸ್ಟೇಟ್ ವ್ಯವಹಾರವನ್ನು 10-12 ವರ್ಷಗಳಿಂದ ಮಾಡುತ್ತೇನೆ. ನನ್ನ ಖಾಯಂ ವಾಸ ಬೆಂಗಳೂರು ಇರುತ್ತದೆ. ನಾನು ಬೆಂಗಳೂರು ಬಿಟ್ಟು ಬೇರೆ ಕಡೆ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತೇನೆ.

ಪ್ರತಿವಾದಿ ಸುರೇಶ್ ಇವರು 10-15 ವರ್ಷಗಳಿಂದ ಪರಿಚಯವಿರುತ್ತಾರೆ. ಸದರಿಯವರು ಚಳ್ಳಕೆರೆಯಲ್ಲಿ ಶಿವಪ್ರಸಾದ್ ಆಟೋ ಪಾರ್ಟ್ಸ್ ಅಂಗಡಿ ಇಟ್ಟುಕೊಂಡು ವ್ಯವಹಾರ ಮಾಡುತ್ತಾರೆ. 2019 ಕ್ಕಿಂತ ಹಿಂದೆ ಪ್ರತಿವಾದಿ ಸುರೇಶ್ ಇವರು ಶಿವಪ್ರಸಾದ್ ಆಟೋ ಪಾರ್ಟ್ಸ್ ಅಂಗಡಿ ವ್ಯವಹಾರ ಚೆನ್ನಾಗಿ ನಡೆಯುತ್ತಿತ್ತು ಎಂದರೆ ಸರಿ. ಅದೇ ರೀತಿ ಶಿವಪ್ರಸಾದ್ ಇವರು ನನಗೆ 10-15 ವರ್ಷಗಳಿಂದ ಪರಿಚಯವಿರುವ ಸಮಯದಲ್ಲಿ ನನ್ನ ಮತ್ತು ಪ್ರತಿವಾದಿಯವರ ಮಧ್ಯೆ ಹಣವನ್ನು ಕೊಡು ತೆಗೆದುಕೊಳ್ಳುವ ವ್ಯವಹಾರ ಇತ್ತು ಅಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಪ್ರತಿವಾದಿಗೆ ಸಾಲ ಕೊಡುತ್ತಿದ್ದು ಸದರಿಯವರು ಕೂಡ ನನಗೆ ಕೇಳಿದಾಗ ಸಾಲ ಕೊಡುತ್ತಿದ್ದರು ಎಂದರೆ ಸಾಕ್ಷಿಯು ನಾನು ಪ್ರತಿವಾದಿಗೆ ಸಾಲ ಕೊಡುತ್ತಿದ್ದೆನು ಆದರೆ ನಾನು ಪ್ರತಿವಾದಿಯಿಂದ ಸಾಲವನ್ನು ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ ಕಡೆಯಿಂದ ಸಾಲ ಪಡೆಯುತ್ತಿದ್ದರೂ ಸಹ ಪಡೆಯುತ್ತಿಲ್ಲ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬಕ್ಕೆ ಸೇರಿದ ಒಂದು ಕಮರ್ಶಿಯಲ್ ಕಾಂಪ್ಲೆಕ್ಸ್ ಬೆಂಗಳೂರಿನಲ್ಲಿ ಇರುತ್ತದೆ. ನನ್ನ ಕುಟುಂಬದಲ್ಲಿ ನನ್ನ ತಾಯಿ, ನಾನು, ನನ್ನ ಹೆಂಡತಿ ಹಾಗೂ ನನ್ನ ಇಬ್ಬರು ಮಕ್ಕಳು ವಾಸವಾಗಿರುತ್ತೇವೆ. ನಮ್ಮ ಕುಟುಂಬದ ವ್ಯವಹಾರವನ್ನು ಮತ್ತು ಮನೆಯ ಯಜಮಾನಿಕೆಯನ್ನು ನಾನೇ ಮಾಡುತ್ತೇನೆ. ನನ್ನ ತಂದೆ ಮರಣಹೊಂದಿರುತ್ತಾರೆ. ನನ್ನ ತಂದೆ ತೀರಿಕೊಂಡು 32 ವರ್ಷ ಆಗಿರುತ್ತದೆ. ನನ್ನ ತಂದೆ ತಾಯಿಗೆ ನಾನು ಒಬ್ಬನೇ ಮಗ ಹಾಗೂ ಒಬ್ಬ ಮಗಳು ಇರುತ್ತೇವೆ. ಬೆಂಗಳೂರಿನಲ್ಲಿರುವ ಕಮರ್ಶಿಯಲ್ ಕಾಂಪ್ಲೆಕ್ಸ್ ನನ್ನ ತಾತನ ಆಸ್ತಿಯಾಗಿರುತ್ತದೆ.

ನಾನು ನನ್ನ ಸ್ವಂತಕ್ಕೆ ಬೆಂಗಳೂರಿನ ಬಸವೇಶ್ವರ ನಗರದಲ್ಲಿ 65 ಇಂಟು 45 ಅಳತೆಯ ಸೈಟ್ ಖರೀದಿಸಿರುತ್ತೇನೆ. ಸದರಿ ಖಾತೆ ನಂಬರ್ ನನಗೆ ಗೊತ್ತಿರುವುದಿಲ್ಲ . ಈ ಮೇಲೆ ಹೇಳಿದ ಸೈಟು ನನ್ನ ಹೆಸರಿಗೆ ಇದೆ ಅಂತ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ. ರಿಯಲ್

ಎಸ್ಟೇಟ್?ವ್ಯವಹಾರವನ್ನು ನಾನು ಸ್ವಂತ ಬಂಡಾವಾಳ ಹಾಕಿಯೂ ಹಾಗೂ ಪಾರ್ಟನರ್ ಶಿಪ್?ಮೂಲಕ ಕೂಡ ಬಂಡವಾಳ ಹಾಕಿ ವ್ಯವಹಾರ ಮಾಡುತ್ತೇನೆ. ನನಗೆ ರಿಯಲ್?ಎಸ್ಟೇಟ್?ವ್ಯವಹಾರಕ್ಕೆ ನನಗೆ ಕಮರ್ಶಿಯಲ್?ಕಾಂಪ್ಲೆಕ್ಸ್ ನಿಂದ ಬಾಡಿಗೆ ಬರುತ್ತಿದ್ದು ಹಾಗೂ ನನ್ನ ಬಳಿ ಇರುವ ದುಡ್ಡನ್ನು ಹಾಕಿ ವ್ಯವಹಾರ ಮಾಡುತ್ತೇನೆ. ಸದರಿ ಕಮರ್ಶಿಯಲ್?ಕಾಂಪ್ಲೆಕ್ಸ್ ನಿಂದ ನನಗೆ ತಿಂಗಳಿಗೆ ರೂ. 1,00,000/- ಬಾಡಿಗೆ ಬರುತ್ತದೆ. ಕಮರ್ಶಿಯಲ್?ಕಾಂಪ್ಲೆಕ್ಸ್ ನಿಂದ ನನಗೆ ತಿಂಗಳಿಗೆ ರೂ. 1,00,000/- ಬಾಡಿಗೆ ಬರುತ್ತದೆ ಅಂತ ತೋರಿಸಲು ಕೂಡ ನಾನು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ.

ಪಾರ್ಟನರ್ ಶಿಪ್?ಫರ್ಮ್ ನಲ್ಲಿ ನಾನು ರಿಯಲ್?ಎಸ್ಟೇಟ್?ವ್ಯವಹಾರ ಮಾಡುತ್ತೇನೆ ಅಂತ ತೋರಿಸಲು ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರನಿರುತ್ತೇನೆ. ಈ ಕುರಿತು ದಾಖಲೆ ಹಾಜರುಪಡಿಸಿಲ್ಲ.

ನನಗೂ ಪ್ರತಿವಾದಿ ಸುರೇಶ್? ಇವರಿಗೂ ಸುಮಾರು 10-12 ವರ್ಷಗಳಿಂದ ಹಣ ಕೊಡು ತೆಗೆದುಕೊಳ್ಳುವ ವ್ಯವಹಾರ ಇತ್ತು, ಪ್ರತಿವಾದಿ ನನಗೆ ಹಣ ಕೇಳಿದಾಗ ಕೊಟ್ಟಿರುತ್ತೇನೆ. ನಾನು ಪ್ರತಿವಾದಿಗೆ ಸಾಲ ಕೊಡಬೇಕಾದಾಗ ಬ್ಯಾಂಕ್?ಮೂಲಕ ಹಣ ಕೊಡುತ್ತಿದ್ದೆನು. ನಾನು ಪ್ರತಿವಾದಿಗೆ ಪ್ರತೀ ಸಾರಿ ಬ್ಯಾಂಕ್?ಮೂಲಕ ಹಣ ಕೊಡುತ್ತಿದ್ದು, ನಗದಾಗಿ ಹಣ ಕೊಟ್ಟಿರುವುದಿಲ್ಲ. ಅದೇ ರೀತಿ ನಾನು ಪ್ರತಿವಾದಿಗೆ ಕೇವಲ ಸಾಲ ಅಂತ ಹಣ ಕೊಡುತ್ತಿದ್ದು ಆದರೆ ಬಡ್ಡಿಗೆ ಹಣ ಕೊಟ್ಟಿರುವುದಿಲ್ಲ.

ನಾನು ಹಾಗೂ ಪ್ರತಿವಾದಿ ಸಂಬಂಧಿಕರಿರುವುದಿಲ್ಲ, ಆದರೆ ಸ್ನೇಹಿತರಿರುತ್ತೇವೆ. ನಾನು ಹಾಗೂ ಪ್ರತಿವಾದಿಯವರ ಮಧ್ಯೆ ನಡೆದ ಹಣದ ವ್ಯವಹಾರದಲ್ಲಿ ನಾನು ಯಾವತ್ತೂ ಬಡ್ಡಿ ಯನ್ನು ಪ್ರತಿವಾದಿಯಿಂದ ಪಡೆದಿರುವುದಿಲ್ಲ. ಸದರಿ ವಿಚಾರವನ್ನು ನನ್ನ ದಾವೆಯಲ್ಲಿ ಹೇಳಿರುವುದಿಲ್ಲ.

ಸರ್ವೆ ನಂ. 383 ರಲ್ಲಿ ಒಟ್ಟು 5 ಎಕರೆ 35 ಗುಂಟೇ ಜಮಿನು, ಸರ್ವೆ ನಂ. 658 ರಲ್ಲಿ 4 ಎಕರೆ 2 ಗುಂಟೆ, ಸರ್ವೆ ನಂ. 656 ರಲ್ಲಿ 4 ಎಕರೆ 15 ಗುಂಟೆ , ಸರ್ವೆ ನಂ. 657 ರಲ್ಲಿ 4 ಎಕರೆ 20 ಗುಂಟೆ ಜಮೀನು ಪ್ರತಿವಾದಿ ಸುರೇಶ್? ಈತನಿಗೆ ಸಂಬಂಧಪಟ್ಟಿದ್ದು ಇರುತ್ತದೆ ಎಂದರೆ ಸರಿ. ಸದರಿ ಜಮೀನುಗಳನ್ನು ನಾನು ನೋಡಿರುತ್ತೇನೆ.

ಸದರಿ ಜಮೀನುಗಳು ನಾಯಕೆನಹಟ್ಟಿ ಹೋಬಳಿ, ವರವು ಕಾವಲ್?ನಲ್ಲಿ ಬರುತ್ತವೆ. ಚಳ್ಳಕೆರೆ ಟೌನಿಗೂ ಹಾಗೂ ವರವು ಕಾವಲ್?ನಲ್ಲಿರುವ ಜಮಿನುಗಳಿಗೂ ಸುಮಾರು 15 ಕಿ.ಮೀ ಅಂತರ ಇರುತ್ತದೆ.

ನಾನು ಚಳ್ಳಕೆರೆ ತಾಲ್ಲೂಕಿನಲ್ಲಿ ರಿಯಲ್?ಎಸ್ಟೇಟ್?ವ್ಯವಹಾರ ಮಾಡಿರುವುದಿಲ್ಲ. ಚಳ್ಳಕೆರೆ ತಾಲ್ಲೂಕಿನಲ್ಲಿ ಪ್ರತೀ ಎಕರೆಗೆ ಎಷ್ಟು ಮಾರುಕಟ್ಟೆ ಬೆಲೆ ಇರುತ್ತದೆ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿಯು ಒಂದೊಂದು ಏರಿಯಾಗೆ ಒಂದೊಂದು ರೀತಿ ರೇಟ್? ಇರುತ್ತದೆ ಅಂತ ಸಾಕ್ಷಿ ನುಡಿಯುತ್ತಾರೆ. ನಾಯಕನಹಟ್ಟಿ ಹೋಬಳಿ ಜಮೀನು ಪ್ರತೀ ಎಕರೆಗೆ ರೂ.5,50,000/- ಮಾರುಕಟ್ಟೆ ಬೆಲೆ ಇರುತ್ತದೆ . ಈ ಕುರಿತು ಮಾರುಕಟ್ಟೆ ಬೆಲೆ ಇರುತ್ತದೆ ಅಂತ ತೋರಿಸಲು ಸಬ್?ರಿಜಿಸ್ಟ್ರಾರ್ ಕಚೇರಿಯಿಂದ ದಾಖಲೆ

ಹಾಜರುಪಡಿಸಿರುವುದಿಲ್ಲ.

ಪ್ರತಿವಾದಿ ನನ್ನಿಂದ ಸಾಲ ಅಂತ ಹಣ ಪಡೆದಿರುವುದಿಲ್ಲ, ಜಮೀನು ಮಾರಾಟ ಮಾಡುತ್ತೇನೆ ಅಂತ ಹೇಳಿ ತಿಳಿಸಿರುತ್ತಾರೆ. ಈ ಪ್ರಕರಣ ದಾಖಲಿಸಲು ಮಾಹಿತಿಯನ್ನುನಮ್ಮ ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ನನ್ನ ದಾವೆಯಲ್ಲಿ ಪ್ರತಿವಾದಿಯು ತನಗೆ ಹಣಕಾಸಿನ ಅಡಚಣೆ ಇತ್ತು ಅಂತ ಹೇಳಿ ನನಗೆ ರೂ. 1 ಕೋಟಿ 2 ಲಕ್ಷ ಹಣ ಕೇಳಿರುತ್ತಾರೆ ಅಂತ ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಸಾಕ್ಷಿ ಮುಂದುವರೆದು ಪ್ರತಿವಾದಿಯು ಜಮೀನು ಮಾರಾಟ ಮಾಡುತ್ತೇನೆ ಅಂತ ಕೂಡ ಹೇಳಿರುತ್ತಾನೆ ಅಂತ ಸಾಕ್ಷಿ ನುಡಿಯುತ್ತಾರೆ. ಅದೇ ರೀತಿ ಸದರಿ ಹಣಕ್ಕೆ ಪ್ರತಿವಾದಿಯು ನನಗೆ ಶೇಕಡಾ 24 ರಷ್ಟು ವಾರ್ಷಿಕ ಬಡ್ಡಿ ಕೊಡುತ್ತೇನೆ ಅಂತ ಹೇಳಿರುತ್ತಾನೆ ಅಂತ ವಾದ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ಹಣವನ್ನು ಪ್ರತಿವಾದಿ 2 ವರ್ಷಗಳಲ್ಲಿ ತೀರುವಳಿ ಮಾಡುತ್ತಾನೆ ಅಂತ ಹೇಳಿರುತ್ತಾನೆ ಅಂತ ವಾದಪತ್ರದಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ಆ ಪ್ರಕಾರ ನಾನು ರೂ. 1 ಕೋಟಿ 2 ಲಕ್ಷ ಹಣವನ್ನು ಸಂಪೂರ್ಣವಾಗಿ ಪ್ರತಿವಾದಿಗೆ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಹಣಕ್ಕೆ ಪ್ರತಿವಾದಿಯು ನನಗೆ ರೂ.39,35,000/- ಬಡ್ಡಿ ಕೊಟ್ಟಿರುತ್ತಾನೆ.

ಸದರಿ ಹಣವನ್ನು ಪ್ರತಿವಾದಿ ತನ್ನ ಶಿವಪ್ರಸಾದ್?ಆಟೋ ಪಾರ್ಟ್ಸ್ ವ್ಯವಹಾರದಲ್ಲಿ ನನ್ನ ಅಕೌಂಟಿಗೆ ಹಣ ಜಮಾ ಮಾಡಿರುತ್ತಾರೆ.

2019 ನೇ ಇಸವಿವರೆಗೆ ನನಗೆ ಪ್ರತಿವಾದಿಯು ಬಡ್ಡಿ ಕೊಟ್ಟಿರುತ್ತಾನೆ. 2019 ನೇ ಇಸವಿಯಲ್ಲಿ ಕೋವಿಡ್?ಬಂದಿದ್ದರಿಂದ ನನಗೆ ಪ್ರತಿವಾದಿಯು ತಾತ್ಕಾಲಿಕವಾಗಿ ಬಡ್ಡಿ ಕೊಡುವುದನ್ನು ನಿಲ್ಲಿಸಿರುತ್ತಾನೆ ಎಂದರೆ ಸರಿ. 2019 ರಿಂದ 2 ವರ್ಷ ಕೋವಿಡ್?ಇರುವುದರಿಂದ ಪ್ರತಿವಾದಿಗೆ ಸದರಿ ಶಿವಪ್ರಸಾದ್? ಆಟೋ ಪಾರ್ಟ್ಸ್ ದಿಂದ ಯಾವುದೇ ಆದಾಯ ಇಲ್ಲದೇ ಇರುವುದರಿಂದ ಬಡ್ಡಿ ಕೊಡುವುದನ್ನು ನಿಲ್ಲಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿಯು ನನಗೆ ಕೊಡುವ ಬಡ್ಡಿ ನಿಲ್ಲಿಸಿದ್ದರಿಂದ ನಾನು ಆತನಿಗೆ ಅಸಲು ಹಣ ವಾಪಾಸ್ಸು ಕೊಡಿ ಇಲ್ಲದಿದ್ದರೆ ಬಡ್ಡಿ ಕೊಡಿ ಅಂತ ಪೋನ್?ಮೂಲಕ ಆತನಿಗೆ ಒತ್ತಾಯ ಮಾಡುತ್ತಿದ್ದೆನು ಎಂದರೆ ಸರಿ. ಆಗ ಪ್ರತಿವಾದಿಯು ನನಗೆ ವ್ಯವಹಾರ ನಡೆಯುತ್ತಿಲ್ಲ ಸ್ವಲ್ಪ ದಿನ ತಡೆದುಕೊಳ್ಳಿ ಅಂತ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಪ್ರತಿವಾದಿಯು ನನಗೆ ಬಡ್ಡಿ ಹಾಗು ಅಸಲು ಹಣ ಮರುಪಾವತಿ ಮಾಡದೇ ಇರುವುದರಿಂದ ನನ್ನ ಹಾಗೂ ಆತನ ಮಧ್ಯೆ ವೈಷಮ್ಯ ಉಂಟಾಗಿರುತ್ತದೆ ಎಂದರೆ ಸರಿ. ಆ ಒಂದು ಕಾರಣದಿಂದ ನಾನು ಬೆಂಗಳೂರಿನಿಂದ ನನ್ನ ಜೊತೆ ಒಂದಿಷ್ಟು ಜನರನ್ನು ಕರೆದುಕೊಂಡು ಬಂದು ಶಿವಪ್ರಸಾದ್?ಆಟೋ ಪಾರ್ಟ್ಸ್ ಅಂಗಡಿಯ ಹತ್ತಿರ ಬಡ್ಡಿ ಕೊಡಿ ಅಂತ ಗಲಾಟೆ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಈ ವಿಚಾರ ಪೊಲೀಸ್?ಠಾಣೆ ವರೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಈ ರೀತಿ ನಾವು ಗಲಾಟೆ ಮಾಡಿದ್ದರಿಂದ ಪ್ರತಿವಾದಿಯ ಆರೋಗ್ಯದಲ್ಲಿ ವ್ಯತ್ಯಾಸವಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಯ ಅಂಗಡಿ ಹತ್ತಿರ ಹೋಗಿ ಗಲಾಟೆ ಮಾಡಿದ್ದರಿಂದ ಪ್ರತಿವಾದಿಯು ನನ್ನ ಮೇಲೆ ಸಿವಿಲ್?ನ್ಯಾಯಾಲಯ ಕಿರಿಯ ವಿಭಾಗ, ಚಳ್ಳಕೆರೆಯಲ್ಲಿ ಅಸಲು ದಾವೆ ನಂ. 196/2019 ರಂತೆ ಶಾಶ್ವತ ನಿರ್ಭಂದಕಾಜ್ಞೆ ಕೋರಿ ದಾವೆ ಮಾಡಿರುತ್ತಾರೆ ಎಂದರೆ ಸರಿ. ಅ ಪ್ರಕರಣದಲ್ಲಿ ನಾನು ನನ್ನ ಪರವಾಗಿ ವಕೀಲರನ್ನು ನೇಮಕ ಮಾಡಿಕೊಂಡು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಅಸಲು ದಾವೆ ನಂ. 196/2019 ಈ ಕೇಸಿನ ಪ್ರತಿವಾದಿಯಾದ ಆರ್.ಹೆಚ್ ಸುರೇಶ್ ರವರ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನಾಗಲೀ ನನ್ನ ಕಡೆಯವರಾಗಲೀ ಯಾವುದೇ ರೀತಿಯ ತೊಂದರೆ ಕೊಡಬಾರದು ಅಂತ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ವಾಗಿರುತ್ತದೆ ಎಂದರೆ ಸರಿ. ಆದರೂ ಸಹ ನಾನು ನನ್ನ ಬೆಂಬಲಿಗರು ಸೇರಿಕೊಂಡು ಪ್ರತಿವಾದಿಯ ಅಂಗಡಿಯ ಹತ್ತಿರ ಬಂದು ಅಸಲು ಮತ್ತು ಬಡ್ಡಿ ಕೊಡುವಂತೆ ತೊಂದರೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.